**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ 460/2022**

**ಸಿ.ಡಬ್ಲ್ಯೂ: 2 /ಪಿ.ಡಬ್ಲ್ಯೂ: 1**

**ಪ್ರಮಾಣೀಕರಿಸಿದ ದಿನಾಂಕ: 18-12-2024**

| | |
|---|---|
| ಹೆಸರು | ಸರ್ದಾರ್ ಪಾಷ |
| ತಂದೆಯ ಹೆಸರು | ಖಾಸಿಂ ಸಾಬ್ |
| ವಯಸ್ಸು | 51 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಸಂಗನಹಳ್ಳಿ ಗ್ರಾಮ, ಕ್ಯಾಸಂಬಹಳ್ಳಿ |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

1.ಚಾಸಾ.3 ಮತ್ತು 4 ರವರು ನನಗೆ ಗೊತ್ತು. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ನಾನು ಅದಕ್ಕೆ ಸಂಬಂದಿಸಿದಂತೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಹೇಳಿಕೆಯ ಅಂಶಗಳಿಗೆ ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ:-**

2. ದಿ: 02.10.2021 ರಂದು ಬೆಳಗ್ಗೆ 11.30 ಗಂಟೆಗೆ ನಾನು ನನ್ನ ಅಂಗಡಿಯ ಹೊರಗೆ ನಿಂತಿದ್ದಾಗ ಚಾಸಾ.1 ಮತ್ತು ಇತರ ಪೋಲೀಸರು ಮುಂದಿನ ರಸ್ತೆಯಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ಕ್ಯಾಸಂಬಹಳ್ಳಿ ಕಡೆ ಇಂದ ಬಸನವನಗುಡಿ ಕ್ರಾಸ್ ಕಡೆಗೆ ಒಂದು ದ್ವಿಚಕ್ರ ವಾಹನದಲ್ಲಿ ತ್ರಿಬಲ್ ರೈಡಿಂಗ್ ಮಾಡಿ ಒಂದು ವಾಹನವು ಅತೀ ವೇಗ ಮತ್ತು ಅಜಾಗರೂಕತೆ ಇಂದ ಬಂದಿತ್ತು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಸದರಿ ವಾಹನವನ್ನು ನಿಲ್ಲಿಸುವಂತೆ ಸೂಚನೆ ನೀಡಿದ್ದಾಗ ಅದರಲ್ಲಿದ್ದ ಇತರ ಇಬ್ಬರು ವ್ಯಕ್ತಿಗಳು ಉರ್ದು ಭಾಷೆಯಲ್ಲಿ ಗಾಡಿಯನ್ನು ಚಾಸಾ.1 ರವರ ಮೇಲೆ ಹಾಕಲು ಗಾಡಿಯನ್ನು ಓಡಿಸುತ್ತಿದ್ದ ವ್ಯಕ್ತಿಗೆ ಪ್ರಚೋದನೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಸದರಿ ದ್ವಿಚಕ್ರ ವಾಹನದ ಸವಾರನು ಸದರಿ ಗಾಡಿಯನ್ನು ಇನ್ನಷ್ಟು ವೇಗದಿಂದ ಚಲಾಯಿಸಿಕೊಂಡು ಬಂದು ಚಾಸಾ.1 ರವರಿಗೆ ನೇರವಾಗಿ ಬಲಗಾಲಿನ ಮಣಿಕಟ್ಟಿನ ಬಳಿ ಗುದ್ದಿ ಡಿಕ್ಕಿ ಹೊಡೆದನು ಎಂದರೆ ಸರಿಯಲ್ಲ. ಇದರಿಂದ ಚಾಸಾ.1 ರವರು ಕೆಳಗಡೆ ಬಿದ್ದರು ಎಂದರೆ ಸರಿಯಲ್ಲ. ನಂತರ ಪೋಲಿಸೀಸರು ನನ್ನ ಸಮಕ್ಷಮ ಸದರಿ ದ್ವಿಚಕ್ರ ವಾಹನದ ಮೂವರನ್ನು ವಶಕ್ಕೆ ಪಡೆದು ಸದರಿ ವಾಹನವನ್ನು ನೋಡಲಾಗಿ ಅದು ಟಿವಿಎಸ್ ಎಕ್ಸೆಲ್ 100 ಹೆವಿಡ್ಯೂಟಿ ದ್ವಿಚಕ್ರ ವಾಹನ ಸಂಖ್ಯೆ ಕೆಎ 08 ಎಕ್ಸ್ 2663 ಆಗಿತ್ತು ಎಂದರೆ ಸರಿಯಲ್ಲ. ನಂತರ ಪೋಲೀಸರು ನನ್ನ ಸಮಕ್ಷಮ ಅವರ ಹೆಸರು ವಿಳಾಸವನ್ನು ಕೇಳಿ ತಿಳಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ.1 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಯಿತು ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂದ ಪಟ್ಟಂತೆ ನಾನು ಈಗ ಓದಿ ಹೇಳಿದಂತೆ

ದಿಃ**02.10.2021** ರಂದು **----** ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ಈಗ ನಿಪಿ.**1** ಎಂದು ಗುರುತಿಸಲಾಯಿತು.

**3.** ನಾನು ಸದರಿ ಘಟನೆಯ ಬಗ್ಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**

-